14

4

ನಂಬರ: ಎರ್‌ಎರ್‌ಟಿ 340:97-98

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಹಾಸನ ಜಿಲ್ಲೆ
ಹಾಸನ, ದಿನಾಂಕ: 6-3-1998

ಸುತ್ತೋಲೆ

ವಿಷಯ:- ಸರ್ಕಾರದಿಂದ ಮಂಜೂರಾಗಿರುವ ಜಮೀನುಗಳನ್ನು ಭೂ ಮಾಪನ ಮತ್ತು ಎಲ್ಲೆ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಸುತ್ತೋಲೆ ಸಂ. ಎರ್‌ಡಿ 285:96 ದಿನಾಂಕ 20-1-98

2) ಮೈಸೂರು ವಿಭಾಗಾಧಿಕಾರಿಗಳ ಅ.ಸ.ಪತ್ರದ ಸಂ. ಎಲ್‌ಎನ್‌ಡಿ 1(ಬಿ) 239:97-98 ದಿನಾಂಕ 18-2-98

ಹಾಸನ ಜಿಲ್ಲೆಯಲ್ಲಿ ವಿವಿಧ ಉದ್ದೇಶಕ್ಕೆ ಕಾಯ್ದಿರಿಸಿದ ಜಮೀನುಗಳ ಗಡಿ ನಿಗಧಿಪಡಿಸಿ ಹೊಸ ನಂಬರುಗಳನ್ನು ಕೊಡುವ ಕ್ರಮ ಕೈಗೊಳ್ಳಲು ಈ ಕಾರ್ಯಾಲಯದಿಂದ ಹೊರಡಿಸುವ ಆದೇಶದಲ್ಲೇ ಸರ್ವೆ ಕಛೇರಿ ಮತ್ತು ಸಂಬಂಧಪಟ್ಟ ತಹಶೀಲ್ದಾರರಿಗೆ ಸೂಚನೆ ನೀಡಲಾಗುತ್ತಿದ್ದು, ದುರಸ್ತಿ ಕಾರ್ಯ ಕೈಗೊಂಡ ಬಗ್ಗೆ ವರದಿಗಳು ಬರುತ್ತಿರುವುದಿಲ್ಲ.

ಉಲ್ಲೇಖ(1)ರ ಸುತ್ತೋಲೆಯಲ್ಲಿ ಸರ್ಕಾರವು ವಿವಿಧ ಕಾಯ್ದೆಯ ನಿಯಮಗಳ ಅಡಿಯಲ್ಲಿ ಮಂಜೂರಾದ ಜಮೀನನ್ನು ಸಕಾಲದಲ್ಲಿ ಸರಿಯಾಗಿ ಅಳತೆ ಮಾಡಿ ಅವುಗಳ ಎಲ್ಲೆಗಳನ್ನು : ಬೌಂಡರಿಗಳನ್ನು ಗುರುತಿಸದೆ ಇರುವುದರಿಂದ ಅಕ್ಕ ಪಕ್ಕದ ಭೂ ಮಾಲೀಕರು ವತ್ತುವರಿ ಮಾಡಿಕೊಂಡು ವಿವಾದಕ್ಕೆ ಆಸ್ಪದವಾಗುತ್ತಿರುವುದೆಂದೂ, ಈ ವಿವಾದ ತಪ್ಪಿಸಲು ಸರ್ಕಾರದಿಂದ ಮಂಜೂರಾದ ಜಮೀನುಗಳನ್ನು ಒಂದು ತಿಂಗಳೊಳಗಾಗಿ ಭೂ ದಾಖಲೆಗಳ ಇಲಾಖೆಯಿಂದ ಅಳತೆ ಕೆಲಸ ಪೂರೈಸಿ ಗಡಿ : ಬೌಂಡರಿ ನಿಗಧಿಪಡಿಸಿ, ಸಂಬಂಧಪಟ್ಟ ದಾಖಲೆಗಳನ್ನು ದುರಸ್ತಿಪಡಿಸಲು ಹಾಗೂ ಸರ್ಕಾರದಿಂದ ಮಂಜೂರಾಗದೆ ಉಳಿದಿರುವ ಜಮೀನನ್ನು ಸಂರಕ್ಷಿಸಲು ಅವಶ್ಯ ಕ್ರಮ ಕೈಗೊಳ್ಳಲು ಸುತ್ತೋಲೆ ಹೊರಡಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಭೂ ಮಾಪನ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು : ನೌಕರರು ಸರ್ಕಾರದಿಂದ ಮಂಜೂರಾದ ಜಮೀನಿನ ದುರಸ್ತಿ ಕಾರ್ಯವನ್ನು ಜಮೀನು ಮಂಜೂರಾದ ಒಂದು ತಿಂಗಳೊಳಗಾಗಿ ಬೌಂಡರಿ : ಗಡಿ ಗುರುತುಗಳನ್ನು ನಿಗಧಿಪಡಿಸುವ ಕಾರ್ಯ ಪೂರ್ಣಗೊಳಿಸಿ, ಸಂಬಂಧಪಟ್ಟ ದಾಖಲೆಗಳಲ್ಲಿ ನೊಂದಾಯಿಸಿ ಪ್ರತಿ ಮಾಹೆಯ ಅಂತ್ಯಕ್ಕೆ ಈ ಕಾರ್ಯಾಲಯಕ್ಕೆ ಪ್ರಗತಿ ವರದಿ ಕಳುಹಿಸಿಕೊಡಲು ಹಾಗೂ ಉಳಿದಿರುವ ಸರ್ಕಾರಿ ಜಮೀನನ್ನು ಸಂರಕ್ಷಿಸಲು ತಹಶೀಲ್ದಾರರು : ರಾಜಸ್ವ ನಿರೀಕ್ಷಕರು : ಗ್ರಾಮಲೆಕ್ಕಾಧಿಕಾರಿಗಳಿಗೆ ಸೂಚಿಸಿದೆ.

ಸಹಿ:
(ರಾಕೇಶ ಸಿಂಗ್)
ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ, ಹಾಸನ

ಪ್ರತಿಯನ್ನು -

1) ಉಪ ವಿಭಾಗಾಧಿಕಾರಿಗಳು, ಹಾಸನ : ಸಕಲೇಶಪುರ ರವರಿಗೆ ತುರ್ತು ಕ್ರಮಕ್ಕಾಗಿ ಹಾಗೂ ಅವರ ಪ್ರವಾಸ ಕಾಲದಲ್ಲಿ ಪರಿಶೀಲಿಸಿ, ತಹಶೀಲ್ದಾರರು : ಸರ್ವೆ ಇಲಾಖೆ ನೌಕರರಿಗೆ ಸೂಕ್ತ ನಿರ್ದೇಶನ ನೀಡಲು ಕಳಿಸಿದೆ.

2) ಪ್ರತಿಯನ್ನು ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಹೆಚ್‌ಆರ್‌ಪಿ.(ಪುನರ್ವಸತಿ), ಹಾಸನ ರವರಿಗೆ. ಅವರ ಕಛೇರಿಯಿಂದ ಮಂಜೂರಾದ ಜಮೀನು ಸಕಾಲದಲ್ಲಿ ದುರಸ್ತಿ ಮಾಡಲಾಗಿದೆಯೇ ಎಂಬ ಬಗ್ಗೆ ಉಸ್ತುವಾರಿ ನಡೆಸಲು ತಿಳಿಸಿ ಕಳಿಸಿದೆ.

—2